# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 477 |
| ಸದಸ್ಯರ ಹೆಸರು | : ಶ್ರೀ ಕೆ.ಎಸ್. ನವೀನ್<br>(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ಸಚಿವರು | : ಸಾರಿಗೆ ಸಚಿವರು |
| ಉತ್ತರಿಸಬೇಕಾದ ದಿನಾಂಕ | : 19.08.2026 |

<table>
<tr><th></th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ರಾಜ್ಯದಲ್ಲಿ ಸಾರಿಗೆ ಇಲಾಖೆಯಲ್ಲಿ ಒಟ್ಟು ಎಷ್ಟು ವಾಹನಗಳಿವೆ; (ಬಸ್ಸುಗಳು, ಕಾರುಗಳು, ಇಲಾಖಾವಾರು ವಿವರ ನೀಡುವುದು)</td><td>
ರಾಜ್ಯದಲ್ಲಿ ಸಾರಿಗೆ ಇಲಾಖೆಯ ಅಧೀನದಲ್ಲಿ ಬರುವ ರಾಜ್ಯ ರಸ್ತೆ ಸಾರಿಗೆಯ ಒಟ್ಟು 04 ನಿಗಮಗಳಲ್ಲಿ ಪ್ರಸ್ತುತ ಕಾರ್ಯಾಚರಣೆಯಲ್ಲಿರುವ ಡೀಸೆಲ್ ಹಾಗೂ ಎಲೆಕ್ಟ್ರಿಕ್ ಬಸ್ಸುಗಳ ವಿವರ ಈ ಕೆಳಕಂಡಂತಿದೆ.
<table>
<tr><th>ನಿಗಮಗಳು</th><th>ಒಟ್ಟು ಡೀಸೆಲ್ ಬಸ್ಸುಗಳ ಸಂಖ್ಯೆ</th><th>ಒಟ್ಟು ಎಲೆಕ್ಟ್ರಿಕ್ ಬಸ್ಸುಗಳ ಸಂಖ್ಯೆ(ಗುತ್ತಿಗೆ ಆಧಾರದಲ್ಲಿ)</th></tr>
<tr><td>ಕ.ರಾ.ರ.ಸಾ.ನಿಗಮ</td><td>8771</td><td>50</td></tr>
<tr><td>ಬೆಂ.ಮ.ಸಾ.ಸಂಸ್ಥೆ</td><td>5180</td><td>1779</td></tr>
<tr><td>ಕ.ಕ.ರ.ಸಾ.ಸಂಸ್ಥೆ</td><td>4812</td><td>-</td></tr>
<tr><td>ವಾ.ಕ.ರ.ಸಾ.ಸಂಸ್ಥೆ</td><td>5429</td><td>-</td></tr>
<tr><td>ಒಟ್ಟು ಬಸ್ಸುಗಳ ಸಂಖ್ಯೆ</td><td>24,192</td><td>1,829</td></tr>
</table>
ಸಾರಿಗೆ ಇಲಾಖೆಯ ಅಧೀನದಲ್ಲಿ ಬರುವ ರಾಜ್ಯ ರಸ್ತೆ ಸಾರಿಗೆಯ 04 ನಿಗಮಗಳಲ್ಲಿ ಹೊಂದಿರುವ ಇಲಾಖಾ ವಾಹನಗಳ (ಕಾರು ಹಾಗೂ ಇತರೆ ವಾಹನಗಳ) ವಿವರ ಈ ಕೆಳಕಂಡಂತಿದೆ.
<table>
<tr><th>ನಿಗಮಗಳು</th><th>ಒಟ್ಟು</th></tr>
<tr><td>ಕ.ರಾ.ರ.ಸಾ.ನಿ</td><td>222</td></tr>
<tr><td>ಬೆಂ.ಮ.ಸಾ.ಸಂಸ್ಥೆ</td><td>143</td></tr>
<tr><td>ಕ.ಕ.ರ.ಸಾ.ಸಂಸ್ಥೆ</td><td>107</td></tr>
<tr><td>ವಾ.ಕ.ರ.ಸಾ.ಸಂಸ್ಥೆ</td><td>108</td></tr>
<tr><td>ಒಟ್ಟು ಇಲಾಖಾ ವಾಹನಗಳ ಸಂಖ್ಯೆ</td><td>580</td></tr>
</table>
ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ ಇಲಾಖೆಯ ಅಡಿಯಲ್ಲಿ ಇರುವ ಕಾರು ಮತ್ತು ವಾಹನಗಳ ಸಂಖ್ಯೆ 243.
</td></tr>
</table>



[illegible] Trans (Computer No. 2284308)

| | | |
|---|---|---|
| ಆ) | ಹಳೆಯ ಹಾಗೂ ಉಪಯೋಗಕ್ಕೆ ಬಾರದಿರುವ ವಾಹನಗಳ ವಿವರ ನೀಡುವುದು; (ಹಳೆಯ ವಾಹನಗಳನ್ನು ಯಾವ ರೀತಿ ಸ್ಕ್ರಾಪ್ ಗೆ ಹಾಕಲಾಗುತ್ತದೆ) | ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯ, ಭಾರತ ಸರ್ಕಾರವು ಸ್ವಯಂ ಪ್ರೇರಿತ ವಾಹನ ಫ್ಲೀಟ್ ಆಧುನೀಕರಣ [Voluntary Vehicle-Fleet Modernization Program (V-VMP)] ಕಾರ್ಯಕ್ರಮವನ್ನು ಪ್ರಾರಂಭಿಸಿದ್ದು, ಈ ನೀತಿಯು ಹಳೆಯ ಅನರ್ಹ ಮಾಲಿನ್ಯಕಾರಕ ವಾಹನಗಳನ್ನು ನಾಶಪಡಿಸಲು ಮತ್ತು ಅವುಗಳನ್ನು ಸುರಕ್ಷಿತ ಹಾಗೂ ಇಂಧನ ಸಮರ್ಥ ವಾಹನಗಳೊಂದಿಗೆ ಬದಲಾಯಿಸುವ ಗುರಿಯನ್ನು ಹೊಂದಿರುತ್ತದೆ. ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯ, ಭಾರತ ಸರ್ಕಾರದಿಂದ ಹೊರಡಿಸಿದ ಅಧಿಸೂಚನೆ ಸಂ: GSR 653 (E), dated:23-9-2021 & GSR 695 (E) dated:13-09-2022 ರನ್ವಯ ಕರ್ನಾಟಕ ರಾಜ್ಯದಲ್ಲೂ ನೋಂದಾಯಿತ ವಾಹನಗಳ ಸ್ಕ್ರಾಪಿಂಗ್ ಪಾಲಿಸಿ, 2022ನ್ನು ಜಾರಿಗೊಳಿಸಲು ಅಧಿಸೂಚನೆ ಸಂಖ್ಯೆ: ಟಿಡಿ 191 ಟಿಡಿಓ 2022 ರಲ್ಲಿ ಆದೇಶಿಸಿರುತ್ತದೆ. 15 ವರ್ಷ ಮೀರಿದ ಸರ್ಕಾರಿ ವಾಹನಗಳನ್ನು ಕಡ್ಡಾಯವಾಗಿ ಸ್ಕ್ರ್ಯಾಪ್ ಮಾಡಲು ಆದೇಶಿಸಲಾಗಿದೆ. ಇದುವರೆವಿಗೆ ಒಟ್ಟು 9976 ಸರ್ಕಾರಿ ವಾಹನಗಳು, 3390 ಖಾಸಗಿ ವಾಹನಗಳನ್ನು ಸ್ಕ್ರಾಪಿಂಗ್ ಪಾಲಿಸಿ ಪ್ರಕಾರ ನಾಶಪಡಿಸಲಾಗಿದೆ |
| ಇ) | ಯಾವ ಯಾವ ಇಲಾಖೆಗಳಲ್ಲಿ ಎಷ್ಟು ವಾಹನಗಳನ್ನು ಬಾಡಿಗೆ ತೆಗೆದು ತೆಗೆದುಕೊಳ್ಳಲಾಗಿದೆ; (ಇಲಾಖಾವಾರು ವಿವರ ನೀಡುವುದು) | ಸಾರಿಗೆ ಇಲಾಖೆ ಮತ್ತು ಸಾರಿಗೆ ನಿಗಮ/ ಸಂಸ್ಥೆಗಳಲ್ಲಿ ಯಾವುದೇ ವಾಹನಗಳನ್ನು ಬಾಡಿಗೆಗೆ ತೆಗೆದುಕೊಂಡಿರುವುದಿಲ್ಲ.<br>ಆಯಾ ಇಲಾಖೆಗಳು ಅವರವರ ಅಗತ್ಯತೆಗನುಸಾರವಾಗಿ ವಾಹನಗಳನ್ನು ಬಾಡಿಗೆ ಆಧಾರದ ಮೇಲೆ ನಿಯಮಾನುಸಾರ ಪಡೆದುಕೊಳ್ಳುತ್ತವೆ. |
| ಈ) | ರಾಜ್ಯದಲ್ಲಿ ಒಟ್ಟು ಎಷ್ಟು ವಿದ್ಯುತ್ ಚಾಲಿತ ವಾಹನಗಳಿವೆ ಹಾಗೂ ಮುಂದೆ ಹೊಸದಾಗಿ ಖರೀದಿಸಲು ನಿರ್ಧಾರ ಮಾಡಿರುವ ವಾಹನಗಳನ್ನು ವಿದ್ಯುತ್ ಚಾಲಿತ ವಾಹನಗಳನ್ನು ಖರೀದಿಸುವ ಬಗ್ಗೆ ಸರ್ಕಾರದ ನಿಲುವೇನು? | ರಾಜ್ಯದಲ್ಲಿ ಒಟ್ಟು 862671 ಎಲೆಕ್ಟ್ರಿಕ್ ವಾಹನಗಳಿವೆ.<br>ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ವ್ಯಾಪ್ತಿಯಲ್ಲಿ ಕೇಂದ್ರ ಸರ್ಕಾರದ ಫೇಮ್-II 2023 ಸಾಲಿನ ಯೋಜನೆಯಲ್ಲಿ 50 ಸಂಖ್ಯೆಯ ಎಲೆಕ್ಟ್ರಿಕ್ ಬಸ್ಸುಗಳನ್ನು ಜಿಸಿಸಿ ಮಾದರಿಯಲ್ಲಿ ಕಾರ್ಯಾಚರಣೆ ಮಾಡಲಾಗುತ್ತಿರುತ್ತದೆ.<br>ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಗುತ್ತಿಗೆ ಆಧಾರದ ಮೇಲೆ 1779 ಎಲೆಕ್ಟ್ರಿಕ್ ಬಸ್ಸುಗಳನ್ನು ಆಚರಣೆ ಮಾಡಲಾಗುತ್ತಿದೆ. ಪಿಎಂಇ-ಡ್ರೈವ್ ಯೋಜನೆಯಡಿ 4500 ಎಲೆಕ್ಟ್ರಿಕ್ ಬಸ್‌ಗಳನ್ನು ಜಿಸಿಸಿ ಆಧಾರದ ಮೇಲೆ ಆಚರಣೆ ಮಾಡಲು ಕೇಂದ್ರ ಸರ್ಕಾರವು ಮಂಜೂರಾತಿ ನೀಡಿದ್ದು, ಟೆಂಡರ್ ಪ್ರಕ್ರಿಯೆಯು ಪೂರ್ಣಗೊಂಡಿದ್ದು, ಟೆಂಡರ್‌ನಲ್ಲಿ ಆಯ್ಕೆಯಾದ ಕಂಪನಿಗಳಿಗೆ ಆದೇಶವನ್ನು ನೀಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. |

| | | |
|---|---|---|
| | | ಮುಂದುವರೆದು, ಕೇಂದ್ರ ಸರ್ಕಾರದ PM e-bus sewa ಯೋಜನೆಯಡಿ ಕರ್ನಾಟಕ ರಾಜ್ಯಕ್ಕೆ 750 e-bus ಗಳು ಜಿಸಿಸಿ ಮಾದರಿಯಲ್ಲಿ ಕಾರ್ಯಚರಣೆಗೊಳಿಸಲು ಮಂಜೂರಾಗಿದ್ದು, ಇವುಗಳ ಪೈಕಿ ಕ.ರಾ.ರ.ಸಾ ನಿಗಮಕ್ಕೆ 350, ಕ.ಕ.ರ.ಸಾ ನಿಗಮಕ್ಕೆ 200, ವಾ.ಕ.ರ.ಸಾ ನಿಗಮಕ್ಕೆ 200 ಬಸ್ಸುಗಳು ಹಂಚಿಕೆಯಾಗಿರುತ್ತವೆ. |

ಟಿಡಿ 69 ಟಿಡಿಕ್ಯೂ 2026

(ಬಿ.ಎಸ್. ಸುರೇಶ)
ಸಾರಿಗೆ ಸಚಿವರು.